2

# ಭಾರತ ಸಾರಥಿ

21/07/2026

BHARATHA SARATHI KANNADA DAILY NEWS PAPER

ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ ।
ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ

ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

## ಹೆಚ್.ವಿ.ಅನಂತಸುಬ್ಬರಾವ್ ಸ್ಮರಣಾರ್ಥ ಕೈಪಿಡಿ ಬಿಡುಗಡೆ

ಬೆಂಗಳೂರು

ಕೆಎಸ್ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್‌ನ ಮಾಜಿ ಅಧ್ಯಕ್ಷರು ಹಾಗೂ ಸಾರಿಗೆ ನೌಕರರ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸಿದ ಹಿರಿಯ ಕಾರ್ಮಿಕ ನಾಯಕ ದಿವಂಗತ ಹೆಚ್.ವಿ. ಅನಂತ ಸುಬ್ಬರಾವ್ ಅವರ ಜನ್ಮದಿನದ ಅಂಗವಾಗಿ ವಿಶೇಷ ಸ್ಮರಣಾ ಕೈಪಿಡಿಯನ್ನು ಬಿಡುಗಡೆ ಮಾಡಿ ಗೌರವ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಸಾರಿಗೆ ನೌಕರರು, ಅಭಿಮಾನಿಗಳು, ಕಾರ್ಮಿಕ ಸಂಘಟನೆಗಳ ಮುಖಂಡರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ಅನಂತ ಸುಬ್ಬರಾವ್ ಅವರ ಸೇವೆಯನ್ನು ಸ್ಮರಿಸಿದರು.



ಕೈಪಿಡಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಹಿರಿಯ ಹೋರಾಟಗಾರ ಗಂಡಸಿ ಸದಾನಂದ ಸ್ವಾಮಿ, ಅನಂತ ಸುಬ್ಬರಾವ್ ಅವರು ತಮ್ಮ ಜೀವನವನ್ನೇ ಸಾರಿಗೆ ನೌಕರರ ಕಲ್ಯಾಣ, ಹಕ್ಕುಗಳ ರಕ್ಷಣೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಮುಡಿಪಾಗಿಟ್ಟಿದ್ದರು ಎಂದು ಹೇಳಿದರು.

"ಅವರ ಮಾರ್ಗದರ್ಶನ ಮತ್ತು ಹೋರಾಟದಿಂದ ಸಾವಿರಾರು ಸಾರಿಗೆ ನೌಕರರಿಗೆ ನ್ಯಾಯ ದೊರೆತಿದೆ. ನೌಕರರ ಪರ ಅವರು ನಡೆಸಿದ ಹೋರಾಟಗಳು, ಸಾಧನೆಗಳು ಮತ್ತು ಸಾಮಾಜಿಕ ಸೇವೆಗಳ ಬಗ್ಗೆ ಮಹಾಗ್ರಂಥವನ್ನೇ ರಚಿಸಿದರೂ ಅದು ಕಡಿಮೆಯೇ. ಅವರ ಆದರ್ಶಗಳು ಮುಂದಿನ ಪೀಳಿಗೆಗೂ ದಾರಿದೀಪವಾಗಲಿವೆ" ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಅನಂತ ಸುಬ್ಬರಾವ್ ಅವರ ಜನ್ಮದಿನವನ್ನು ಸ್ಮರಣೀಯವಾಗಿಸಲು ಅಭಿಮಾನಿಗಳು ಹಾಗೂ ಸಹೋದ್ಯೋಗಿಗಳು ಅವರಿಗೆ ಭಾವಪೂರ್ಣ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜ್ಯೋತಿ ಅನಂತ ಸುಬ್ಬರಾವ್, ಜಯ ದೇವರಾಜ ಅರಸು, ಕವಳಿಕಾಯಿ, ರಂಗೇಗೌಡ ಸೇರಿದಂತೆ ಹಲವಾರು ಕಾರ್ಮಿಕ ಮುಖಂಡರು, ಹೋರಾಟಗಾರರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮಹಾಂತೇಶ್ ಹಿರೇಮಠ ಅವರ ನೇತೃತ್ವದಲ್ಲಿ ಹೆಚ್.ವಿ. ಅನಂತ ಸುಬ್ಬರಾವ್ ಅವರ ಜೀವನ, ಹೋರಾಟ ಹಾಗೂ ಕೊಡುಗೆಗಳನ್ನು ದಾಖಲಿಸಿರುವ ವಿಶೇಷ ಕೈಪಿಡಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಯಿತು.

## ಜಯಮಂಗಲ ಗ್ರಾಮದ ಕಾಮಗಾರಿಗಳಲ್ಲಿ ಅಕ್ರಮ ಆರೋಪ

ಕೋಲಾರ

ಮಾಲೂರು ತಾಲೂಕಿನ ಜಯಮಂಗಲ ಗ್ರಾಮದಲ್ಲಿ ತಾಲ್ಲೂಕು ಆಡಳಿತ ಹಾಗೂ ಶಾಸಕರ ನಿಧಿಯಿಂದ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದಲ್ಲಿ ಲೋಪದೋಷ ಹಾಗೂ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಗ್ರಾಮದ ನಿವಾಸಿ ಗೌತಮ್ ಕೆ. ಅವರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗೆ ದೂರು ಸಲ್ಲಿಸಿದ್ದಾರೆ.

ದೂರಿನಲ್ಲಿ ಉಲ್ಲೇಖಿಸಿರುವಂತೆ, ಜಯಮಂಗಲ ಗ್ರಾಮದ ಸಾರ್ವಜನಿಕ ಆಟದ ಮೈದಾನದ ಸ್ವಚ್ಛತೆ, ಪ್ರವೇಶ ದ್ವಾರದ ಅಳವಡಿಕೆ ಹಾಗೂ ರಾಜಕಾಲುವೆಗಳ ಸ್ವಚ್ಛತೆ ಸೇರಿದಂತೆ ಹಲವು ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳುವಂತೆ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದರೂ ಗ್ರಾಮ ಪಂಚಾಯಿತಿ ಆಡಳಿತ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಲಾಗಿದೆ.

ರಾಜಕಾಲುವೆಗಳನ್ನು ಸ್ವಚ್ಛಗೊಳಿಸದ ಕಾರಣ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಗ್ರಾಮದಲ್ಲಿ ಸ್ವಚ್ಛತೆ ಮತ್ತು ಮೂಲಸೌಕರ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಇದೇ ವಿಚಾರವನ್ನು 'ಶಾಸಕರ ನಡಿಗೆ ಗ್ರಾಮದ ಕಡೆ' ಕಾರ್ಯಕ್ರಮದಲ್ಲಿಯೂ ಪ್ರಸ್ತಾಪಿಸಿ ದೂರು ನೀಡಲಾಗಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗೌತಮ್ ಕೆ. ಆರೋಪಿಸಿದ್ದಾರೆ.

ಅಲ್ಲದೆ, ಕಾಮಗಾರಿಗಳ ವಿವರ ಹಾಗೂ ವೆಚ್ಚದ ಮಾಹಿತಿಯನ್ನು ನೀಡುವಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಮನವಿ ಸಲ್ಲಿಸಿದ್ದರೂ ಈವರೆಗೆ ಯಾವುದೇ ಮಾಹಿತಿ ಒದಗಿಸಿಲ್ಲ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಜಯಮಂಗಲ ಗ್ರಾಮದಲ್ಲಿ ಕೈಗೊಂಡಿರುವ ಕಾಮಗಾರಿಗಳ ಅನುಷ್ಠಾನ ಹಾಗೂ ವೆಚ್ಚದ ಕುರಿತು ಸಮಗ್ರ ತನಿಖೆ ನಡೆಸಿ, ಅಕ್ರಮ ಅಥವಾ ಲೋಪದೋಷಗಳು ಕಂಡುಬಂದರೆ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಗೌತಮ್ ಕೆ. ಅವರು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯನ್ನು ಒತ್ತಾಯಿಸಿದ್ದಾರೆ.

## ಹೊರಪೇಟೆ ಕರಿಬಸವೇಶ್ವರಸ್ವಾಮಿ ಮಠದ ಚನ್ನಬಸವರಾಜೇಂದ್ರ ಸ್ವಾಮೀಜಿ ಶಿವೈಕ್ಯ

ತುಮಕೂರು

ನಗರದ ಹೊರಪೇಟೆಯ ಕರಿಬಸವೇಶ್ವರಸ್ವಾಮಿ ಮಠದ ಚನ್ನಬಸವರಾಜೇಂದ್ರ ಸ್ವಾಮೀಜಿ ಶನಿವಾರ ಮುಂಜಾನೆ ಶಿವೈಕ್ಯರಾದರು. ಇವರಿಗೆ 98 ವರ್ಷ ವಯಸ್ಸಾಗಿತ್ತು. ಕೆಲವು ದಿನಗಳಿಂದ ಸ್ವಾಮೀಜಿಗಳು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಉರುವಕೊಂಡ ಮಠದಲ್ಲಿ ವಾಸ್ತವ್ಯ ಹೂಡಿದ್ದು ವಯೋಸಹಜ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದರು, ಮುಂಜಾನೆ ಕೊನೆಯುಸಿರೆಳೆದರು.

ಚನ್ನಬಸವರಾಜೇಂದ್ರ ಸ್ವಾಮೀಜಿಗಳು ಶಿವೈಕ್ಯರಾದ ಹಿನ್ನೆಲೆಯಲ್ಲಿ ನಗರದ ಕರಿಬಸವೇಶ್ವರಸ್ವಾಮಿ ಮಠದಲ್ಲಿ ಭಕ್ತರು ಸ್ವಾಮೀಜಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಕ್ತನಮನ ಸಲ್ಲಿಸಿದರು. ಶಾಸಕ ಜಿ.ಬಿ. ಜ್ಯೋತಿಗಣೇಶ್, ನಗರ ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಕೋರಿ ಮಂಜುನಾಥ್, ಉಪಾಧ್ಯಕ್ಷ ಟಿ.ಬಿ. ಹರೀಶ್ ಮತ್ತಿತರರು ಆಗಮಿಸಿ ಸ್ವಾಮೀಜಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಮರ್ಪಿಸಿದರು.

ಜಗದ್ಗುರು ಪಂಚಾಚಾರ್ಯ ಸೇವಾ ಟ್ರಸ್ಟ್ ಅಧ್ಯಕ್ಷ ಟಿ.ಆರ್. ಸದಾಶಿವಯ್ಯ, ಮುಖಂಡರಾದ ಮನೋಜ್ ಹರಳೂರು, ದಯಾನಂದ್, ಟಿ.ಜಿ. ಬಸವರಾಜು, ಪ್ರತಾಪ್, ರವಿ ಮಲ್ಲಣ್ಣ, ಬಂಬೂ ಮೋಹನ್, ವಿಕಾಸ್ ಆರಾಧ್ಯ, ಪರಿಣಿತ್, ಪ್ರಜ್ವಲ್, ವಿಜಯಕುಮಾರ್, ಹೇಮಂತ್ ಮತ್ತಿತರರು ಭಾಗವಹಿಸಿ ಭಕ್ತಿ ನಮನ ಸಲ್ಲಿಸಿದರು.

# ಜೆಪಿ ನಗರದಲ್ಲಿ ಡಿಬೀಟ್ಸ್ ಡ್ಯಾನ್ಸ್ ಸ್ಟುಡಿಯೋ ಉದ್ಘಾಟನೆ





ಬೆಂಗಳೂರು

ನಗರದ ಜೆಪಿ ನಗರದಲ್ಲಿ ನೂತನವಾಗಿ ಆರಂಭಗೊಂಡಿರುವ ಡಿಬೀಟ್ಸ್ ಡ್ಯಾನ್ಸ್ ಸ್ಟುಡಿಯೋ ಉದ್ಘಾಟನಾ ಸಮಾರಂಭವು ಸಂಭ್ರಮದಿಂದ ನೆರವೇರಿತು. ನೂತನ ಸ್ಟುಡಿಯೋವನ್ನು ನಟ ಹಾಗೂ ನಿರ್ಮಾಪಕ ಗಂಡಸಿ ಸದಾನಂದ ಸ್ವಾಮಿ ಉದ್ಘಾಟಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗಂಡಸಿ ಸದಾನಂದ ಸ್ವಾಮಿ, "ನೃತ್ಯವು ಕೇವಲ ಮನರಂಜನೆಯ ಕಲೆಯಲ್ಲ. ಅದು ಶಿಸ್ತು, ಆತ್ಮವಿಶ್ವಾಸ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುವ ಶ್ರೇಷ್ಠ ಕಲೆಯಾಗಿದೆ. ಇಂತಹ ನೃತ್ಯ ತರಬೇತಿ ಕೇಂದ್ರಗಳು ಯುವ ಪ್ರತಿಭೆಗಳಿಗೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗುತ್ತವೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹೋಲಿ ಸ್ಪಿರಿಟ್ ಶಾಲೆ ಮತ್ತು ಪಿಯು ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಲಿಮ್ನಾ ಜಸ್ಟಿನ್ ಹಾಗೂ ಪಿ. ಸೆಲ್ವಕುಮಾರ್ ಭಾಗವಹಿಸಿ ನೂತನ ಸ್ಟುಡಿಯೋಗೆ ಶುಭ ಹಾರೈಸಿದರು.

ನೃತ್ಯ ಕ್ಷೇತ್ರದ ಗಣ್ಯರು, ಕಲಾವಿದರು, ಸ್ನೇಹಿತರು, ಆಹ್ವಾನಿತ ಅತಿಥಿಗಳು ಹಾಗೂ ನೃತ್ಯಾಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಭ್ರಮಿಸಿದರು.

ಡಿಬೀಟ್ಸ್ ಡ್ಯಾನ್ಸ್ ಸ್ಟುಡಿಯೋದ ಸಂಸ್ಥಾಪಕ ಆಸೀಫ್ ಮಾತನಾಡಿ, ಯುವ ಪ್ರತಿಭೆಗಳಿಗೆ ಗುಣಮಟ್ಟದ ನೃತ್ಯ ತರಬೇತಿ ನೀಡುವ ಉದ್ದೇಶದಿಂದ ಈ ಸ್ಟುಡಿಯೋ ಆರಂಭಿಸಲಾಗಿದೆ. ಮಕ್ಕಳಿಂದ ಯುವಕರವರೆಗೆ ವಿವಿಧ ಆಸಕ್ತಿಯುಳ್ಳವರಿಗೆ ಹಲವು ಶೈಲಿಯ ನೃತ್ಯಗಳಲ್ಲಿ ವೃತ್ತಿಪರ ತರಬೇತಿ ನೀಡಲಾಗುವುದು ಎಂದು ತಿಳಿಸಿದರು. ಉದ್ಘಾಟನಾ ಸಮಾರಂಭದ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಆಕರ್ಷಕ ನೃತ್ಯ ಪ್ರದರ್ಶನಗಳು ನಡೆದಿದ್ದು, ನೆರೆದವರ ಗಮನ ಸೆಳೆದವು. ಗಣ್ಯರ ಶುಭಾಶಯಗಳೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯಗೊಂಡಿತು.



## ಹಯಾತ್ ಸೆಂಟ್ರಿಕ್ ಹೆಬ್ಬಾಳದಲ್ಲಿ 'ಓಹ್ಮಾಮಿ' ಆರಂಭ

ಬೆಂಗಳೂರು

ಹಯಾತ್ ಸೆಂಟ್ರಿಕ್ ಹೆಬ್ಬಾಳ ಬೆಂಗಳೂರು ತನ್ನ 12ನೇ ಮಹಡಿಯಲ್ಲಿ ಹೊಸ ಮೇಲ್ಛಾವಣಿಯ ಭೋಜನ ತಾಣ **'ಓಹ್ಮಾಮಿ'**ಯನ್ನು ಉದ್ಘಾಟಿಸಿದೆ. ಸಮಕಾಲೀನ ಪ್ಯಾನ್–ಏಷ್ಯನ್ ಪಾಕಶೈಲಿ, ವಿಶೇಷ ಪಾನೀಯಗಳು, ಸಂಗೀತ ಮತ್ತು ಆಕರ್ಷಕ ವಾತಾವರಣವನ್ನು ಒಂದೇ ವೇದಿಕೆಯಲ್ಲಿ ಒದಗಿಸುವ ಉದ್ದೇಶದಿಂದ ಈ ಹೊಸ ತಾಣವನ್ನು ರೂಪಿಸಲಾಗಿದೆ.



ಹಗಲು ಮತ್ತು ರಾತ್ರಿ ಎರಡೂ ಸಮಯಗಳಲ್ಲಿ ವಿಭಿನ್ನ ಅನುಭವ ನೀಡುವಂತೆ ವಿನ್ಯಾಸಗೊಳಿಸಿರುವ 'ಓಹ್ಮಾಮಿ'ಯಲ್ಲಿ ಏಷ್ಯಾದ ವಿವಿಧ ದೇಶಗಳ ಪಾಕಪದ್ಧತಿಗಳಿಂದ ಪ್ರೇರಿತ ಆಹಾರ, ವಿಶೇಷ ಪಾನೀಯಗಳು ಹಾಗೂ ಮನರಂಜನೆಯ ವಾತಾವರಣವನ್ನು ಗ್ರಾಹಕರಿಗೆ ಪರಿಚಯಿಸಲಾಗುತ್ತಿದೆ.

ಕೇವಲ ಭೋಜನದ ಅನುಭವಕ್ಕೆ ಸೀಮಿತವಾಗದೆ, ಸ್ನೇಹಿತರ ಭೇಟಿ, ಕುಟುಂಬದ ಸಮಾರಂಭಗಳು ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ಸೂಕ್ತ ತಾಣವಾಗುವಂತೆ ಇದನ್ನು ಅಭಿವೃದ್ಧಿಪಡಿಸಲಾಗಿದೆ.

ಆಧುನಿಕ ವಿನ್ಯಾಸ, ಸೊಗಸಾದ ಒಳಾಂಗಣ ಅಲಂಕಾರ ಹಾಗೂ ನಗರದ ವಿಹಂಗಮ ನೋಟದೊಂದಿಗೆ 'ಓಹ್ಮಾಮಿ' ಬೆಂಗಳೂರಿನ ಆಹಾರಪ್ರಿಯರಿಗೆ ಹೊಸ ಅನುಭವವನ್ನು ನೀಡುವ ಗುರಿ ಹೊಂದಿದೆ. ಪಾಕಶೈಲಿ, ಆತಿಥ್ಯ ಮತ್ತು ಸಂಗೀತದ ಸಮನ್ವಯದ ಮೂಲಕ ವಿಶಿಷ್ಟ ಭೋಜನ ಸಂಸ್ಕೃತಿಯನ್ನು ಪರಿಚಯಿಸುವ ಪ್ರಯತ್ನ ಇದಾಗಿದೆ.

ಈ ಕುರಿತು ಹಯಾತ್ ಸೆಂಟ್ರಿಕ್ ಹೆಬ್ಬಾಳ ಬೆಂಗಳೂರಿನ ಪ್ರಧಾನ ವ್ಯವಸ್ಥಾಪಕ ಮನೂಜ್ ಸಾಹ್ನಿ ಮಾತನಾಡಿ, "ಬೆಂಗಳೂರು ನಗರಕ್ಕೆ 'ಓಹ್ಮಾಮಿ'ಯನ್ನು ಪರಿಚಯಿಸುತ್ತಿರುವುದು ನಮಗೆ ಸಂತಸದ ವಿಷಯ.

ವಿನ್ಯಾಸದಿಂದ ಹಿಡಿದು ಆಹಾರ ಮತ್ತು ಪಾನೀಯಗಳ ಅನುಭವದವರೆಗೆ ಪ್ರತಿಯೊಂದು ಅಂಶವನ್ನು ನಮ್ಮ ತಂಡ ಅತ್ಯಂತ ಕಾಳಜಿಯಿಂದ ರೂಪಿಸಿದೆ.

ವಿಭಿನ್ನ ಸಂದರ್ಭಗಳಿಗೆ ಸೂಕ್ತವಾಗುವ, ವಿಶಿಷ್ಟ ವಾತಾವರಣ ಹೊಂದಿರುವ ತಾಣವನ್ನು ಸೃಷ್ಟಿಸುವುದು ನಮ್ಮ ಉದ್ದೇಶವಾಗಿತ್ತು. ಇದೀಗ ಈ ಹೊಸ ಅನುಭವವನ್ನು ನಗರದ ಜನರೊಂದಿಗೆ ಹಂಚಿಕೊಳ್ಳಲು ನಾವು ಸಿದ್ಧರಾಗಿದ್ದೇವೆ" ಎಂದು ಹೇಳಿದರು.

# ಮಳೆಗಾಗಿ ಕತ್ತೆಗಳಿಗೆ ಪೂಜೆ

ವೈ.ಎನ್.ಹೊಸಕೋಟೆ

ಮಳೆಯ ಕೊರತೆಯಿಂದ ಕಂಗಾಲಾಗಿರುವ ರೈತರು ಉತ್ತಮ ಮಳೆಯಾಗಲೆಂದು ಶನಿವಾರ ಗ್ರಾಮದಲ್ಲಿ ಕತ್ತೆಗಳಿಗೆ ವಿಶೇಷ ಪೂಜೆ ಸಲ್ಲಿಸಿ ಮೆರವಣಿಗೆ ನಡೆಸುವ ಮೂಲಕ ಮಳೆರಾಯನಿಗೆ ಪ್ರಾರ್ಥನೆ ಸಲ್ಲಿಸಿದರು.

ಈ ಭಾಗದಲ್ಲಿ ಮಳೆಯನ್ನು ನಂಬಿ ಶೇಂಗಾ ಬಿತ್ತನೆ ಮಾಡಿರುವ ರೈತರು ಮಳೆಯಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ನಿರಂತರ ಬಿಸಿಲಿನ ತಾಪದಿಂದ ಬಹುತೇಕ ಜಮೀನುಗಳಲ್ಲಿ ಶೇಂಗಾ ಬೆಳೆ ಮೊಳಕೆಯ ಹಂತದಲ್ಲೇ ಒಣಗಲಾರಂಭಿಸಿದ್ದು, ರೈತರಲ್ಲಿ ಆತಂಕ ಮನೆ ಮಾಡಿದೆ.

ಮಳೆಯ ಕೊರತೆಯಿಂದ ಕೊಳವೆಬಾವಿಗಳಲ್ಲೂ ನೀರಿನ ಮಟ್ಟ ಕುಸಿದಿದ್ದು, ನೀರಾವರಿಗೆ ಅಗತ್ಯ ಪ್ರಮಾಣದ ನೀರು ದೊರೆಯುತ್ತಿಲ್ಲ. ಇದರ ಪರಿಣಾಮ ಅಡಿಕೆ ಹಾಗೂ ತೆಂಗಿನ ತೋಟಗಳನ್ನು ಹೊಂದಿರುವ ರೈತರೂ ಸಹ ಚಿಂತೆಗೆ ಒಳಗಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಉತ್ತಮ ಮಳೆಯಾಗಲೆಂದು ಗ್ರಾಮೀಣ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಆಚರಣೆಗಳು ಮತ್ತೆ ಜೀವ ಪಡೆದಿವೆ. ಮಡಿಕೆಯಲ್ಲಿ ಕಪ್ಪೆಯನ್ನು ಇಟ್ಟು, ತಂಗಟೆ ಹೂವನ್ನು ಅಲಂಕರಿಸಿಕೊಂಡು ಮನೆ ಮನೆಗೆ ತೆರಳಿ "ಬಾರಯ್ಯ ಮಳೆರಾಯ" ಎಂದು ಹಾಡುವ ಸಂಪ್ರದಾಯವನ್ನು ಗ್ರಾಮಸ್ಥರು ಪುನರಾರಂಭಿಸಿದ್ದಾರೆ.

ಅದೇ ರೀತಿಯಲ್ಲಿ ಕತ್ತೆಗಳಿಗೆ ಪೂಜೆ ಸಲ್ಲಿಸಿ ಗ್ರಾಮದಲ್ಲಿ ಮೆರವಣಿಗೆ ನಡೆಸುವುದು, ಕೆರೆ–ಕುಂಟೆಗಳ ಬಳಿ ಹೋಗಿ ಮಳೆರಾಯನಿಗೆ ಪ್ರಾರ್ಥಿಸುವುದು, ಬುಡ್ಡೇಕಲ್ಲುಗಳಿಗೆ ನೀರೆರೆಯುವುದು ಹಾಗೂ ಕುಂಭಾಭಿಷೇಕ ಸೇರಿದಂತೆ ವಿವಿಧ ಸಂಪ್ರದಾಯಗಳನ್ನು ರೈತರು ಆಚರಿಸುತ್ತಿದ್ದಾರೆ.



ಹೋಬಳಿ ಕೇಂದ್ರದಲ್ಲಿರುವ ಗ್ರಾಮದೇವತೆ ಮಾರಮ್ಮ ದೇವಾಲಯದ ಬಳಿ ಎರಡು ಕತ್ತೆಗಳಿಗೆ ಸಂಪ್ರದಾಯಬದ್ಧವಾಗಿ ಪೂಜೆ ಸಲ್ಲಿಸಿದ ರೈತರು, ಬಳಿಕ ತಮಟೆ ವಾದ್ಯಗಳೊಂದಿಗೆ ಗ್ರಾಮದ ನಾಲ್ಕು ಬುಡ್ಡೇಕಲ್ಲುಗಳವರೆಗೆ ಮೆರವಣಿಗೆ ನಡೆಸಿದರು. ಪ್ರತಿಯೊಂದು ಸ್ಥಳದಲ್ಲೂ ವಿಶೇಷ ಪೂಜೆ ಸಲ್ಲಿಸಿ ಗ್ರಾಮಕ್ಕೆ ಉತ್ತಮ ಮಳೆ ಕರುಣಿಸುವಂತೆ ಪ್ರಾರ್ಥಿಸಿದರು.

ಕತ್ತೆಗಳ ಮೆರವಣಿಗೆಯು ಬೆಸ್ತರಹಳ್ಳಿ ರಸ್ತೆ, ಮಹಾತ್ಮ ಗಾಂಧೀಜಿ ವೃತ್ತ, ಭೀಮನಕುಂಟೆ ರಸ್ತೆ ಸೇರಿದಂತೆ ಪ್ರಮುಖ ಬೀದಿಗಳ ಮೂಲಕ ಸಂಚರಿಸಿ, ಕೊನೆಗೆ ಕೋಟೇಶ್ವರಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಸಮಾಪ್ತಿ ಯಾಯಿತು.

ಮಳೆಯ ಕೊರತೆಯಿಂದ ಸಂಕಷ್ಟದಲ್ಲಿರುವ ರೈತರು ಪ್ರಕೃತಿಯ ಅನುಗ್ರಹಕ್ಕಾಗಿ ಶತಮಾನಗಳಿಂದ ನಡೆದುಕೊಂಡು ಬಂದಿರುವ ಇಂತಹ ಸಾಂಪ್ರದಾಯಿಕ ಆಚರಣೆಗಳನ್ನು ಮುಂದುವರಿಸುತ್ತಿದ್ದು, ಶೀಘ್ರದಲ್ಲೇ ಉತ್ತಮ ಮಳೆಯಾಗಿ ಬೆಳೆಗಳು ಉಳಿಯಲಿ ಎಂಬ ಆಶಯ ವ್ಯಕ್ತಪಡಿಸಿದರು.

## ತೀವ್ರ ಬಿಸಿಲು ನವಜಾತ ಶಿಶುಗಳಿಗೆ ಅಪಾಯ

ಬೆಂಗಳೂರು

ಗರ್ಭಾವಸ್ಥೆಯಲ್ಲಿ ದೀರ್ಘಕಾಲ ತೀವ್ರ ಬಿಸಿಲಿಗೆ ಒಡ್ಡಿಕೊಳ್ಳುವುದರಿಂದ ನವಜಾತ ಶಿಶುಗಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಹೊಸ ರಾಷ್ಟ್ರೀಯ ಅಧ್ಯಯನವೊಂದು ಎಚ್ಚರಿಸಿದೆ. ವಿಶೇಷವಾಗಿ ಕರ್ನಾಟಕದ ಅರೆ–ಶುಷ್ಕ ಪ್ರದೇಶಗಳಲ್ಲಿ ಈ ಸಮಸ್ಯೆ ಹೆಚ್ಚು ಗಂಭೀರವಾಗಿದ್ದು, ಕಡಿಮೆ ತೂಕದ ಮಕ್ಕಳ ಜನನ ಪ್ರಮಾಣದಲ್ಲಿ ಈ ವಲಯ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ ಎಂದು ಅಧ್ಯಯನ ತಿಳಿಸಿದೆ.



ಭಾರತದಲ್ಲಿ ತಾಪಮಾನ ಮತ್ತು ಗರ್ಭಧಾರಣೆಯ ಮೇಲಿನ ಪರಿಣಾಮ ಕುರಿತು ನಡೆಸಲಾದ ಮೊದಲ ವಿಶಾಲ ಜನಸಂಖ್ಯೆ ಆಧಾರಿತ ಅಧ್ಯಯನದಲ್ಲಿ, ಒಳನಾಡಿನ ಕರ್ನಾಟಕದ ಬಹುಪಾಲು ಭಾಗವನ್ನು ಒಳಗೊಂಡಿರುವ ಅರೆ–ಶುಷ್ಕ ಡೆಕ್ಕನ್ ಪ್ರಸ್ಥಭೂಮಿ ವಲಯವು ದೇಶದಲ್ಲಿ ದಾಖಲಾಗಿರುವ ಕಡಿಮೆ ತೂಕದ ಜನನಗಳಲ್ಲಿ ಸುಮಾರು ಮೂರನೇ ಒಂದು ಭಾಗಕ್ಕೆ ಕಾರಣವಾಗಿದೆ.

# ಕರ್ನಾಟಕ ಕಬಡ್ಡಿ ಪ್ರೀಮಿಯರ್ ಲೀಗ್ ಹರಾಜು




ಬೆಂಗಳೂರು

ಕರ್ನಾಟಕ ಕಬಡ್ಡಿ ಪ್ರೀಮಿಯರ್ ಲೀಗ್‌ನ ಚೊಚ್ಚಲ ಆವೃತ್ತಿಯ ಆಟಗಾರರ ಹರಾಜು ಪ್ರಕ್ರಿಯೆ ಅದ್ಧೂರಿಯಾಗಿ ನಡೆದಿದ್ದು, ಸಾಯ್ ಪ್ರಸಾದ್ ಮತ್ತು ಗಗನ್ ಗೌಡ ಅತ್ಯಧಿಕ ಮೊತ್ತ ಪಡೆದ ಆಟಗಾರರಾಗಿ ಹೊರಹೊಮ್ಮಿದ್ದಾರೆ. ನಗರದ ಕೋರಮಂಗಲ ಕ್ಲಬ್‌ನಲ್ಲಿ ನಡೆದ ಹರಾಜಿನಲ್ಲಿ ಎಂಟು ಫ್ರಾಂಚೈಸಿಗಳು ತಮ್ಮ ತಂಡಗಳನ್ನು ಅಂತಿಮಗೊಳಿಸಿದವು.

ಹರಾಜಿನಲ್ಲಿ ಸಾಯ್ ಪ್ರಸಾದ್ ಅವರನ್ನು ಪಡೆಯಲು ಹಲವು ಫ್ರಾಂಚೈಸಿಗಳು ತೀವ್ರ ಪೈಪೋಟಿ ನಡೆಸಿದವು. ಅಂತಿಮವಾಗಿ ಉತ್ತರ ಕನ್ನಡ ಸ್ಟಾಲಿಯನ್ಸ್ ತಂಡವು 3.60 ಲಕ್ಷ ರೂಪಾಯಿ ನೀಡಿ ಅವರನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡಿತು. ಇದು ಲೀಗ್‌ನ ಮೊದಲ ಆವೃತ್ತಿಯಲ್ಲಿ ಆಟಗಾರನೊಬ್ಬ ಪಡೆದ ಗರಿಷ್ಠ ಮೊತ್ತವಾಗಿದೆ.

ಗಗನ್ ಗೌಡ ಅವರಿಗೂ ತೀವ್ರ ಪೈಪೋಟಿ ನಡೆದಿದ್ದು, ಕೊನೆಗೆ ಹೊಯ್ಸಳ ಎಂಪೈರ್ ತಂಡವು 3.20 ಲಕ್ಷ ರೂಪಾಯಿ ನೀಡಿ ಅವರನ್ನು ಖರೀದಿಸಿತು.

ಇನ್ನು ಶುಶೀಲ್ ಕಾಂಬ್ರೇಕರ್ 2.90 ಲಕ್ಷ ರೂಪಾಯಿಗೆ ಮಂಗಳೂರು ಇಂಡಿಯನ್ಸ್ ತಂಡದ ಪಾಲಾದರೆ, ವಿಶ್ವಾಸ್ ಎಸ್. ಅವರನ್ನು ವಿಜಯಪುರ ಲಯನ್ಸ್ 2.60 ಲಕ್ಷ ರೂಪಾಯಿಗೆ ತನ್ನ ತಂಡಕ್ಕೆ ಸೇರಿಸಿಕೊಂಡಿತು. ವಿನೋದ್ ನಾಯಕ್ ಅವರನ್ನು ಉತ್ತರ ಕನ್ನಡ ಸ್ಟಾಲಿಯನ್ಸ್ 2.20 ಲಕ್ಷ ರೂಪಾಯಿಗೆ ಖರೀದಿಸಿತು. ಇವರೊಂದಿಗೆ ಮನೋಜ್ ಗೌಡ, ಅಭಿಷೇಕ್ ಎಸ್., ಮಹಮ್ಮದ್ ಆಫ್ರಿದ್ ಹಾಗೂ ಆನಂದ್ ತಲಾ 2 ಲಕ್ಷ ರೂಪಾಯಿಗೆ ವಿವಿಧ ಫ್ರಾಂಚೈಸಿಗಳಿಂದ ಆಯ್ಕೆಯಾಗುವ ಮೂಲಕ ಗಮನ ಸೆಳೆದರು. ಒಟ್ಟಾರೆ ಹರಾಜಿನಲ್ಲಿ ಒಂಬತ್ತು ಆಟಗಾರರು 2 ಲಕ್ಷ ರೂಪಾಯಿಗೂ ಅಧಿಕ ಮೊತ್ತ ಪಡೆದರು.

ಪ್ರತಿ ಫ್ರಾಂಚೈಸಿಗೆ ಗರಿಷ್ಠ 10 ಲಕ್ಷ ರೂಪಾಯಿಗಳ ಆಟಗಾರರ ಖರೀದಿ ಮಿತಿ ನಿಗದಿಪಡಿಸಲಾಗಿತ್ತು. ಈ ಮೊತ್ತವನ್ನು ಸಮರ್ಥವಾಗಿ ಬಳಸಿಕೊಂಡ ತಂಡಗಳು ಗರಿಷ್ಠ 14 ಆಟಗಾರರನ್ನು ಖರೀದಿಸಿ ಮುಂಬರುವ ಚೊಚ್ಚಲ ಕರ್ನಾಟಕ ಕಬಡ್ಡಿ ಪ್ರೀಮಿಯರ್ ಲೀಗ್‌ಗೆ ಬಲಿಷ್ಠ ತಂಡಗಳನ್ನು ರೂಪಿಸಿಕೊಂಡಿವೆ.

ಭಾರತೀಯ ಕ್ರಿಕೆಟ್ ಪ್ರೀಮಿಯರ್ ಲೀಗ್ ಹಾಗೂ ವೃತ್ತಿಪರ ಕಬಡ್ಡಿ ಲೀಗ್ ಮಾದರಿಯಲ್ಲಿ ನಡೆದ ಹರಾಜಿನಲ್ಲಿ ಎಂಟೂ ಫ್ರಾಂಚೈಸಿಗಳ ಮಾಲೀಕರು, ತರಬೇತುದಾರರು ಹಾಗೂ ಮಾರ್ಗದರ್ಶಕರು ಭಾಗವಹಿಸಿ ಆಟಗಾರರ ಖರೀದಿಗೆ ತೀವ್ರ ಆಸಕ್ತಿ ತೋರಿದರು.

## ಆಕಾಶ್ ಸಂಸ್ಥೆಯ 9 ವಿದ್ಯಾರ್ಥಿಗಳಿಗೆ ಉನ್ನತ ಅಖಿಲ ಭಾರತ ಶ್ರೇಯಾಂಕ

ಉಡುಪಿ

ವೈದ್ಯಕೀಯ ಪ್ರವೇಶ ಪರೀಕ್ಷೆಯಾದ ನೀಟ್ ಯುಜಿ–2026ರಲ್ಲಿ ಆಕಾಶ್ ಎಜ್ಯುಕೇಶನಲ್ ಸರ್ವಿಸಸ್ ಲಿಮಿಟೆಡ್ (ಎಇಎಸ್‌ಎಲ್) ಉಡುಪಿ ಶಾಖೆಯ 9 ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದಲ್ಲಿ ಉನ್ನತ ಶ್ರೇಯಾಂಕಗಳನ್ನು ಗಳಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಪರಿಶ್ರಮ, ಸಂಸ್ಥೆಯ ಗುಣಮಟ್ಟದ ತರಬೇತಿ ಹಾಗೂ ನಿರಂತರ ಶೈಕ್ಷಣಿಕ ಮಾರ್ಗದರ್ಶನದ ಫಲವಾಗಿ ಈ ಯಶಸ್ಸು ಸಾಧ್ಯವಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಉಡುಪಿ ಶಾಖೆಯ ವಿದ್ಯಾರ್ಥಿನಿ ಸಮನ್ವಿ ಮಯ್ಯ ಅಖಿಲ ಭಾರತ 3525ನೇ ಶ್ರೇಯಾಂಕ




ಗಳಿಸಿ ಶಾಖೆಯ ಅಗ್ರ ಸಾಧಕಿಯಾಗಿ ಹೊರಹೊಮ್ಮಿದ್ದಾರೆ. ಇತರ ವಿದ್ಯಾರ್ಥಿಗಳಲ್ಲಿ ಪಂಚಮಿ ಎಂ.ಎಸ್. (17331), ಮಹಮ್ಮದ್ ತಾಲ್ಹಾ (26479), ನರೇಂದ್ರ ಎಸ್. ಪ್ರಭು (50906), ದೇವ್ ಶರ್ಮಾ (57000), ಗ್ರಾಜಿಯಾ ಮಾರಿಯಾ ಬೆನ್ಸನ್ (60815), ದಿವ್ಯಂ ಹಿತೇಶ್ ಶಾಹ (72158), ಅನ್ವೇಷಾ ಜಿ. ಪಾಟೀಲ್ (88326) ಹಾಗೂ ಆಯಿಷಾ ಫತೇಅಲಿ ಉಪ್ಪಿನ್ (89069) ಅಖಿಲ ಭಾರತ ಶ್ರೇಯಾಂಕಗಳನ್ನು ಪಡೆದು ಸಾಧನೆ ಮೆರೆದಿದ್ದಾರೆ.

ರಾಷ್ಟ್ರ ಮಟ್ಟದಲ್ಲಿ ಆಕಾಶ್ ಸಂಸ್ಥೆಯ ನಾಲ್ವರು ವಿದ್ಯಾರ್ಥಿಗಳು ಮೊದಲ ಹತ್ತು ಶ್ರೇಯಾಂಕಗಳಲ್ಲಿ ಸ್ಥಾನ ಪಡೆದಿರುವುದು ಸಂಸ್ಥೆಯ ಮತ್ತೊಂದು ವಿಶೇಷ ಸಾಧನೆಯಾಗಿದೆ.

## ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್‌ಗೆ ಭರ್ಜರಿ ಆರಂಭ

ನವದೆಹಲಿ

ದೇಶದ ಪ್ರಮುಖ ಖಾಸಗಿ ಜೀವ ವಿಮಾ ಸಂಸ್ಥೆಯಾದ ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಉತ್ತಮ ಹಣಕಾಸು ಸಾಧನೆ ದಾಖಲಿಸಿದೆ.

ಜೂನ್ 2026ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಸಂಸ್ಥೆಯ ನಿವ್ವಳ ಲಾಭವು ಶೇ. 28ರಷ್ಟು ಏರಿಕೆ ಕಂಡು 386 ಕೋಟಿ ರೂಪಾಯಿಗೆ ತಲುಪಿದೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಸಂಸ್ಥೆಯು 302 ಕೋಟಿ ರೂಪಾಯಿ ನಿವ್ವಳ ಲಾಭ ದಾಖಲಿಸಿತ್ತು. ಪಾಲಿಸಿದಾರರ ನಿಧಿಯಲ್ಲಿ ಹೆಚ್ಚುವರಿ ಆದಾಯ ಹಾಗೂ ಹೊಸ ವ್ಯವಹಾರಗಳಿಂದ ಉಂಟಾದ ಕಡಿಮೆ ಆರ್ಥಿಕ ಒತ್ತಡವು ಲಾಭದ ಏರಿಕೆಗೆ ಪ್ರಮುಖ ಕಾರಣವಾಗಿದೆ ಎಂದು ಸಂಸ್ಥೆ ತಿಳಿಸಿದೆ.

ನಿಯಂತ್ರಕ ಸಂಸ್ಥೆಗೆ ಸಲ್ಲಿಸಿರುವ ಹಣಕಾಸು ವರದಿಯ ಪ್ರಕಾರ, ಕಂಪನಿಯ ನಿವ್ವಳ ಪ್ರೀಮಿಯಂ ಆದಾಯವೂ ಗಮನಾರ್ಹ ಏರಿಕೆ ಕಂಡಿದೆ. ಕಳೆದ ವರ್ಷದ ಮೊದಲ ತ್ರೈಮಾಸಿಕದಲ್ಲಿ 8,503 ಕೋಟಿ ರೂಪಾಯಿಯಾಗಿದ್ದ ನಿವ್ವಳ ಪ್ರೀಮಿಯಂ ಆದಾಯವು, ಈ ಬಾರಿ 9,749 ಕೋಟಿ ರೂಪಾಯಿಗೆ ಹೆಚ್ಚಳವಾಗಿದೆ.

ಪಾಲಿಸಿಗಳ ಸಂಖ್ಯೆಯಲ್ಲಿ ಶೇ. 13.2ರಷ್ಟು ಬೆಳವಣಿಗೆ ಕಂಡಿರುವ ಹಿನ್ನೆಲೆಯಲ್ಲಿ, ಹೊಸ ವ್ಯವಹಾರಗಳ ಪ್ರೀಮಿಯಂ ಆದಾಯವು ಶೇ. 21ರಷ್ಟು ಏರಿಕೆ ಕಂಡು 4,866 ಕೋಟಿ ರೂಪಾಯಿಗೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದು 4,012 ಕೋಟಿ ರೂಪಾಯಿಯಾಗಿತ್ತು.

## ಬ್ಯಾಟರಿ ಇಂಧನ ಸಂಗ್ರಹ ಘಟಕ ಆರಂಭಿಸಿದ ಮಿಡ್‌ವೆಸ್ಟ್ ಎನರ್ಜಿ

ಬೆಂಗಳೂರು

ಶುದ್ಧ ಇಂಧನ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆಯಾಗಿ, ಮಿಡ್‌ವೆಸ್ಟ್ ಬಿಸಿನೆಸ್ ಹೌಸ್‌ನ ತಂತ್ರಜ್ಞಾನ ಮತ್ತು ಶುದ್ಧ ಇಂಧನ ವಿಭಾಗವಾದ ಮಿಡ್‌ವೆಸ್ಟ್ ಎನರ್ಜಿ ಬೆಂಗಳೂರಿನಲ್ಲಿ 1.2 ಗಿಗಾವಾಟ್–ಗಂಟೆ ಸಾಮರ್ಥ್ಯದ ಬ್ಯಾಟರಿ ಇಂಧನ ಸಂಗ್ರಹ ವ್ಯವಸ್ಥೆ ತಯಾರಿಕಾ ಘಟಕದಲ್ಲಿ ವಾಣಿಜ್ಯ ಉತ್ಪಾದನೆ ಆರಂಭಿಸಿದೆ.

ಹೊಸ ಘಟಕದಲ್ಲಿ ಬ್ಯಾಟರಿ ಸೆಲ್‌ನಿಂದ ಹಿಡಿದು ಸಂಪೂರ್ಣ ಕಂಟೇನರ್ ಆಧಾರಿತ ಇಂಧನ ಸಂಗ್ರಹ ವ್ಯವಸ್ಥೆಯವರೆಗೆ ಸಮಗ್ರ ತಯಾರಿಕಾ ಸೌಲಭ್ಯವನ್ನು



ಅಭಿವೃದ್ಧಿಪಡಿಸಲಾಗಿದೆ. ಇಲ್ಲಿ ಬ್ಯಾಟರಿ ಮಾಡ್ಯೂಲ್‌ಗಳು, ಟ್ರೇಗಳು, ರ್‍ಯಾಕ್‌ಗಳು ಹಾಗೂ ಸಂಪೂರ್ಣ ಕಂಟೇನರ್ ಆಧಾರಿತ ಬ್ಯಾಟರಿ ಇಂಧನ ಸಂಗ್ರಹ ವ್ಯವಸ್ಥೆಗಳನ್ನು ತಯಾರಿಸಲಾಗುತ್ತದೆ.

ಈ ಉತ್ಪನ್ನಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ವಲಯ, ನವೀಕರಿಸಬಹುದಾದ ಇಂಧನ ಯೋಜನೆಗಳು ಹಾಗೂ ರಾಷ್ಟ್ರೀಯ ವಿದ್ಯುತ್ ಜಾಲಕ್ಕೆ ವಿದ್ಯುತ್ ಪೂರೈಸುವ ಬೃಹತ್ ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಪೂರೈಕೆ ಮಾಡಲಾಗುತ್ತದೆ.

# ಹಡಪದ ಅಪ್ಪಣ್ಣ ಜಯಂತಿ: 21ರಂದು ಪೂರ್ವಭಾವಿ ಸಭೆ

ತುಮಕೂರು

ಜಿಲ್ಲಾಡಳಿತದ ವತಿಯಿಂದ ಆಚರಿಸಲಾಗುವ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮ ಆಯೋಜನೆ ಕುರಿತು ಜುಲೈ 21ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಸಭೆಯು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಲಿದ್ದು, ಸಮುದಾಯದ ಎಲ್ಲಾ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಅಗತ್ಯ ಸಲಹೆ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ ಕೆ. ಮಿರ್ಜಿ ಮನವಿ ಮಾಡಿದ್ದಾರೆ.

# ವಿದ್ಯುತ್ ವ್ಯತ್ಯಯ

ತುಮಕೂರು

ಬೆಸ್ಕಾಂ ವಾಣಿಜ್ಯ, ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯಲ್ಲಿ ಹಾಗೂ ನಗರ ಉಪವಿಭಾಗ–2ರ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಜುಲೈ 19ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ವಾಣಿಜ್ಯ, ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯ ಅಂತರಸನಹಳ್ಳಿ, ಬೆಳ್ಳಾವಿ, ಹೆಗ್ಗೆರೆ, ಮಲ್ಲಸಂದ್ರ, ದೊಡ್ಡಸಾರಂಗಿ, ಬೆಳಧರ, ಊರ್ಡಿಗೆರೆ, ಸಿ.ಟಿ.ಕೆರೆ, ತುಮಕೂರು, ಚೇಳೂರು, ಹೊಸಕೆರೆ, ಹಾಗಲವಾಡಿ, ಮೆಳೆಕೋಟೆ, ನಂದಿಹಳ್ಳಿ, ಬಡ್ಡಿಹಳ್ಳಿ, ಕೋರಾ ಉಪಸ್ಥಾವರಗಳಿಂದ ಹೊರಹೊಮ್ಮುವ ಎಲ್ಲಾ 11 ಕೆ.ವಿ. ಪೂರಕಗಳಿಗೆ ಒಳಪಡುವ ಗ್ರಾಮಗಳು/ಕೈಗಾರಿಕಾ ಪ್ರದೇಶಗಳಲ್ಲಿ ಹಾಗೂ ನಗರ ಉಪವಿಭಾಗ–2ರ ವ್ಯಾಪ್ತಿಯ ಬಿ.ಜಿ.ಪಾಳ್ಯ ಸರ್ಕಲ್, ಗುಬ್ಬಿಗೇಟ್, ಕಾಲ್‌ಟೆಕ್ಸ್ ಸರ್ಕಲ್, ಗುಬ್ಬಿಗೇಟ್ ರಿಂಗ್ ರಸ್ತೆ, ಪಿ.ಜಿ.ಲೇಔಟ್, ಟೂಡಾ ಲೇಔಟ್, ನೈಪ್ ಪ್ಯಾಲೇಸ್ ರಿಂಗ್ ರಸ್ತೆ ಬಲಭಾಗ, ಗಂಗಸಂದ್ರ, ಮೆಳೆಕೋಟೆ, ಶೇಷಾದ್ರಿಪುರಂ ಕಾಲೇಜು, ಮಯೂರನಗರ, ರಾಜೀವ್ ಗಾಂಧಿನಗರ, ಶಾಂತಿನಗರ, ಬನಶಂಕರಿ, ಎಸ್.ಎಸ್.ಐ.ಟಿ. ಕಾಲೇಜು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

# ಜುಲೈ ಮಾಹೆಗೆ ಪಡಿತರ ಧಾನ್ಯ ಹಂಚಿಕೆ

ತುಮಕೂರು

ಜಿಲ್ಲೆಯ ಪಡಿತರ ಚೀಟಿದಾರರಿಗೆ ಜುಲೈ ಮಾಹೆಗೆ ವಿತರಿಸಲು ಆಹಾರ ಧಾನ್ಯವನ್ನು ಹಂಚಿಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಕೇಂದ್ರದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಹಾಗೂ ರಾಜ್ಯದ ಅನ್ನಭಾಗ್ಯ ಯೋಜನೆಯಡಿ ಈ ಪಡಿತರ ಧಾನ್ಯವನ್ನು ಹಂಚಿಕೆ ಮಾಡಲಾಗಿದೆ.

ಕೇಂದ್ರದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅಂತ್ಯೋದಯ ಪಡಿತರ ಚೀಟಿದಾರರಿಗೆ 14 ಕೆ.ಜಿ. ಅಕ್ಕಿ ಹಾಗೂ 21 ಕೆ.ಜಿ. ರಾಗಿ; ಆದ್ಯತಾ ಕೇಂದ್ರ ಪಡಿತರ ಚೀಟಿ ಪ್ರತಿ ಸದಸ್ಯರಿಗೆ 2 ಕೆ.ಜಿ. ಅಕ್ಕಿ ಹಾಗೂ 3 ಕೆ.ಜಿ. ರಾಗಿ; ಆದ್ಯತಾ ರಾಜ್ಯ ಪಡಿತರ ಚೀಟಿ ಪ್ರತಿ ಸದಸ್ಯರಿಗೆ 5 ಕೆ.ಜಿ. ಅಕ್ಕಿಯನ್ನು ಹಂಚಿಕೆ ಮಾಡಲಾಗಿದೆ.

ರಾಜ್ಯದ ಅನ್ನಭಾಗ್ಯ ಯೋಜನೆಯಡಿ ಅಂತ್ಯೋದಯ ಪಡಿತರ ಚೀಟಿ(1, 2 ಮತ್ತು 3 ಸದಸ್ಯರ ಪಡಿತರ ಚೀಟಿ ಹೊರತುಪಡಿಸಿ)ಯ ಪ್ರತಿ ಸದಸ್ಯರು, ಪಿಹೆಚ್‌ಹೆಚ್ ಪಡಿತರ ಚೀಟಿಯ ಪ್ರತಿ ಸದಸ್ಯರು ಹಾಗೂ ರಾಜ್ಯ ಪಿಹೆಚ್‌ಹೆಚ್ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ತಲಾ 5 ಕೆ.ಜಿ. ಅಕ್ಕಿಯನ್ನು ಹಂಚಿಕೆ ಮಾಡಲಾಗಿದೆ.

ಪಡಿತರ ವಿತರಣೆಗೆ ಸಂಬಂಧಿಸಿದಂತೆ ಕೇಂದ್ರ ಸಹಾಯವಾಣಿ ಸಂಖ್ಯೆ 1967ಕ್ಕೆ ಕರೆ ಮಾಡಿ ದೂರು ಸಲ್ಲಿಸಬಹುದಾಗಿದೆ. ಅಥವಾ ಹತ್ತಿರದ ಆಹಾರ ಇಲಾಖೆ ಕಚೇರಿಗೆ ಭೇಟಿ ನೀಡಿ ದೂರು ನೀಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಕೀಟನಾಶಕ ಸಿಂಪರಣೆ: ಎಚ್ಚರಿಕೆ ಫಲಕ ಅಳವಡಿಸಲು ಮನವಿ

ತುಮಕೂರು

ಕೃಷಿ ಬೆಳೆಗಳಿಗೆ ಕೀಟ ನಾಶಕಗಳನ್ನು ಸಿಂಪಡಿಸಿದ ನಂತರ ಜಮೀನಿನಲ್ಲಿ ಮೇಯಲು ಬರುವ ಕುರಿ, ಮೇಕೆ, ದನ ಹಾಗೂ ಇತರೆ ಜಾನುವಾರುಗಳು ವಿಷಪೂರಿತ ಹುಲ್ಲು ಮತ್ತು ಎಲೆಗಳನ್ನು ಸೇವಿಸುವುದರಿಂದ ಅವುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿ ಸಾವು ಸಂಭವಿಸುತ್ತಿರುವ ಘಟನೆಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಕೀಟನಾಶಕ ಸಿಂಪಡಣೆ ಮಾಡಿದ ತಕ್ಷಣ, ಸಂಬಂಧಿಸಿದ ಜಮೀನಿನ ಪ್ರವೇಶದ್ವಾರ ಹಾಗೂ ಗೋಚರಿಸುವ ಸ್ಥಳಗಳಲ್ಲಿ "ಈ ಜಮೀನಿಗೆ ಕೀಟನಾಶಕ ಸಿಂಪಡಿಸಲಾಗಿದೆ. ದಯವಿಟ್ಟು ಕುರಿ, ಮೇಕೆ, ದನ ಹಾಗೂ ಇತರೆ ಜಾನುವಾರುಗಳನ್ನು ಮೇಯಲು ಬಿಡಬೇಡಿ" ಎಂಬ ಎಚ್ಚರಿಕೆ ಫಲಕವನ್ನು ಕಡ್ಡಾಯವಾಗಿ ಅಳವಡಿಸಬೇಕು. ಕೀಟನಾಶಕದ ಲೇಬಲ್‌ನಲ್ಲಿ ಸೂಚಿಸಿರುವ ಸುರಕ್ಷಿತ ಅವಧಿ ಮುಗಿಯುವವರೆಗೆ ಕೀಟನಾಶಕ ಸಿಂಪಡಿಸಿದ ಜಮೀನಿಗೆ ಜಾನುವಾರುಗಳನ್ನು ಮೇಯಲು ಬಿಡಬಾರದು ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಆಯುಕ್ತಾಲಯ ರೈತರಲ್ಲಿ ಮನವಿ ಮಾಡಿದೆ.

ಕೃಷಿ ಇಲಾಖೆ / ತೋಟಗಾರಿಕಾ / ಪಶುಸಂಗೋಪನೆ ಇಲಾಖೆ ಅಧಿಕಾರಿಗಳು ರೈತರಿಗೆ ಈ ಕುರಿತು ಅರಿವು ಮೂಡಿಸಿ ಎಚ್ಚರಿಕೆ ಫಲಕಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಬೇಕು. ಸ್ಥಳೀಯ ಗ್ರಾಮ ಪಂಚಾಯಿತಿ, ರೈತ ಸಂಪರ್ಕ ಕೇಂದ್ರ ಹಾಗೂ ಸಂಬಂಧಿಸಿದ ಇಲಾಖೆಗಳು ಎಚ್ಚರಿಕೆ ಫಲಕ ಅಳವಡಿಸಿಕೊಳ್ಳುವ ಬಗ್ಗೆ ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ದಯವಿಟ್ಟು ಕುರಿ, ಮೇಕೆ, ದನ ಹಾಗೂ ಇತರೆ ಜಾನುವಾರುಗಳನ್ನು ಮೇಯಲು ಬಿಡಬೇಡಿ" ಎಂಬ ಎಚ್ಚರಿಕೆ ಫಲಕವನ್ನು ಕಡ್ಡಾಯವಾಗಿ ಅಳವಡಿಸಬೇಕು. ಕೀಟನಾಶಕದ ಲೇಬಲ್‌ನಲ್ಲಿ ಸೂಚಿಸಿರುವ ಸುರಕ್ಷಿತ ಅವಧಿ ಮುಗಿಯುವವರೆಗೆ ಕೀಟನಾಶಕ ಸಿಂಪಡಿಸಿದ ಜಮೀನಿಗೆ ಜಾನುವಾರುಗಳನ್ನು ಮೇಯಲು ಬಿಡಬಾರದು ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಆಯುಕ್ತಾಲಯ ರೈತರಲ್ಲಿ ಮನವಿ ಮಾಡಿದೆ.

ಇಂತಹ ಘಟನೆಗಳು ಮರುಕಳಿಸದಂತೆ ಜಾನುವಾರು ಮಾಲೀಕರಿಗೆ ನಷ್ಟ ಉಂಟಾಗದಂತೆ ಕೃಷಿ/ತೋಟಗಾರಿಕೆ/ ಪಶುಸಂಗೋಪನ ಇಲಾಖೆಯ ಅಧಿಕಾರಿಗಳು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಆಯುಕ್ತಾಲಯದ ಸೂಚನೆಗಳನ್ನು ಪಾಲಿಸಬೇಕೆಂದು ತಿಳಿಸಲಾಗಿದೆ.

# 'ನೀರಿನ ಟ್ಯಾಂಕಿಗೆ ಕಲುಷಿತ ನೀರು ಮಿಶ್ರಣವಾಗಿಲ್ಲ'

ವಿಜಯಪುರ



ಪಟ್ಟಣದಲ್ಲಿನ ನೀರಿನ ಟ್ಯಾಂಕಿಗೆ ಕಲುಷಿತ ನೀರು ಹರಿಸಿಲ್ಲ, ರಸ್ತೆ ಕಾಮಗಾರಿಯ ವೇಳೆ, ಮರಗಳನ್ನು ತೆರವು ಮಾಡುವಾಗ, ಪೈಪ್ ಲೈನ್ ಹೊಡೆದು ಹೋಗಿರುವುದರಿಂದ ಮಣ್ಣು ಮಿಶ್ರಿತ ನೀರು ಟ್ಯಾಂಕಿಗೆ ಹರಿದಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ಎನ್.ಅನುರಾಧ ಅವರು ಹೇಳಿದರು.

ಪಟ್ಟಣದ ಪುರಸಭೆಗೆ ಭೇಟಿ ನೀಡಿದ್ದ ಅವರು, ನೀರು ಸಂಗ್ರಹಣಾ ಟ್ಯಾಂಕುಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ನಂತರ ಮಾತನಾಡಿದರು.

ವಾರ್ಡುಗಳ ಜನರಿಗೆ, ಆಯಾ ವಾರ್ಡುಗಳಲ್ಲಿ ನಿರ್ಮಾಣ ಮಾಡಿರುವ, ಸಂಪುಗಳಿಂದ ಪೈಪ್ ಲೈನ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಟ್ಯಾಂಕುಗಳಿಗೆ ತುಂಬಿಸುತ್ತಿರುವ ನೀರನ್ನು ಟ್ಯಾಂಕರುಗಳಿಗೆ ತುಂಬಿಸಿ, ಪೈಪ್ ಲೈನ್ ಇಲ್ಲದ ಕಡೆಯ ಜನರಿಗೆ ಸರಬರಾಜು ಮಾಡಲಾಗುತ್ತಿದೆ. ಆದರೆ, ಯಾವುದೇ ಕಲುಷಿತ ನೀರು ಟ್ಯಾಂಕಿಗೆ ಬಂದಿಲ್ಲ. ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಗಲೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ಮರಗಳು ತೆರವು ಮಾಡುವಾಗ, ಪೈಪ್ ಲೈನ್ ಗೆ ಹಾನಿಯಾಗಿ, ನೀರಿನ ಜೊತೆಯಲ್ಲಿ ಮಣ್ಣು ಬಂದಿದೆ. ಕೆಲ ವಾರ್ಡುಗಳಲ್ಲಿ ನೀರಿನ ಸಮಸ್ಯೆ ಇದೆ. ಅದನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಎಲ್ಲಾ ವಾರ್ಡುಗಳಿಗೆ ವಾರಕ್ಕೊಮ್ಮೆ ನೀರು ಸರಬರಾಜು ಮಾಡುತ್ತಿದ್ದಾರೆ. ಟ್ಯಾಂಕುಗಳನ್ನು ಸಿಬ್ಬಂದಿ ಸ್ವಚ್ಛಗೊಳಿಸುತ್ತಿದ್ದಾರೆ. ಪಟ್ಟಣದಲ್ಲಿರುವ ನೀರಿನ ಟ್ಯಾಂಕುಗಳು, ಸಂಪುಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ಪುರಸಭೆಯಲ್ಲಿ ಖಾಲಿಯಿರುವ ಇಂಜಿನಿಯರ್ ಹುದ್ದೆಯನ್ನು ಶೀಘ್ರವಾಗಿ ತುಂಬುವಂತಹ ಕೆಲಸ ಮಾಡಲಾಗುತ್ತದೆ. ಸಾರ್ವಜನಿಕರೂ ಕೂಡಾ ಹೆಚ್ಚು ಸಹಕಾರ ನೀಡಬೇಕು ಎಂದರು.

ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಶೇ.7 ರಷ್ಟು ಹೆಚ್ಚಿನ ಮಳೆಯಾಗಿದೆ. ಬಿತ್ತನೆಯೆಲ್ಲಾ ಸ್ವಲ್ಪ ತಡವಾಗಿ ಆಗುತ್ತದೆ. ಮಳೆ ತಡವಾದರೆ, ಬೇರೆ ಬೇರೆ ತಳಿಯ ಬಿತ್ತನೆ ಬೀಜಗಳನ್ನು ತರಿಸಿಟ್ಟುಕೊಂಡಿದ್ದೇವೆ. ರಾಸುಗಳ ಮೇವಿಗೂ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಪಟ್ಟಣದಲ್ಲಿ, ರಸ್ತೆ ಕಾಮಗಾರಿ, ಚರಂಡಿ ಕಾಮಗಾರಿ ಎಲ್ಲವನ್ನೂ ಸದ್ಯಕ್ಕೆ ನಿಲ್ಲಿಸಿ, ಮೊದಲು ಕುಡಿಯುವ ನೀರಿಗೆ ಆದ್ಯತೆ ಕೊಡಿ, ರಸ್ತೆ, ಚರಂಡಿ ಕಾಮಗಾರಿಗಳು ತಂದರೆ, ಅನುಮೋದನೆ ಕೊಡಲ್ಲ, ಟ್ಯಾಂಕುಗಳು ಸ್ವಚ್ಛವಾಗದಿದ್ದರೆ, ನೀರಿನಲ್ಲಿ ಪುನಃ ಮಣ್ಣು ಮಿಶ್ರಣವಾಗಿರುವುದು ಕಂಡು ಬಂದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪುರಸಭೆ ಅಧ್ಯಕ್ಷೆ ಎಸ್.ಭವ್ಯಾಮಹೇಶ್, ಜಿಲ್ಲಾಧಿಕಾರಿ ಕಚೇರಿಯ ಕಾರ್ಯಪಾಲಕ ಅಭಿಯಂತರ ಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರೆ ಸರಿತಾ, ಪುರಸಭಾ ಮುಖ್ಯಾಧಿಕಾರಿ ಸತ್ಯನಾರಾಯಣ, ಪರಿಸರ ಅಭಿಯಂತರ ಶೇಖರ್ ರೆಡ್ಡಿ ಹಾಜರಿದ್ದರು.

# ವಿಶೇಷ ಲೋಕ ಅದಾಲತ್‌ನಲ್ಲಿ 14 ಚೆಕ್ ಬೌನ್ಸ್ ಪ್ರಕರಣಗಳ ರಾಜಿ ಇತ್ಯರ್ಥ

ಚಿಂತಾಮಣಿ



ಚೆಕ್ ಬೌನ್ಸ್ ಪ್ರಕರಣಗಳ ತ್ವರಿತ ವಿಲೇವಾರಿ ಹಾಗೂ ನ್ಯಾಯಾಲಯಗಳ ಮೇಲಿನ ವ್ಯಾಜ್ಯಗಳ ಭಾರ ಕಡಿಮೆ ಮಾಡುವ ಉದ್ದೇಶದಿಂದ ಚಿಂತಾಮಣಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ವಿಶೇಷ ಲೋಕ ಅದಾಲತ್‌ನಲ್ಲಿ 26 ಪ್ರಕರಣಗಳ ಪೈಕಿ 14 ಪ್ರಕರಣಗಳು ರಾಜಿ ಸಂಧಾನದ ಮೂಲಕ ಯಶಸ್ವಿಯಾಗಿ ಇತ್ಯರ್ಥಗೊಂಡಿವೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಕಾರ್ಯದರ್ಶಿ ಶಕುಂತಲಾ ಆರ್ ತಿಳಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಅವರು, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ದೇಶಾದ್ಯಂತ ಚೆಕ್ ಬೌನ್ಸ್ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ವಿಶೇಷ ಲೋಕ ಅದಾಲತ್‌ಗಳನ್ನು ಆಯೋಜಿಸಲಾಗುತ್ತಿದ್ದು, ಅದರ ಭಾಗವಾಗಿ ಚಿಂತಾಮಣಿಯಲ್ಲೂ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಹೇಳಿದರು.

ತಾಲ್ಲೂಕಿನಲ್ಲಿ ಸುಮಾರು 2,000 ಚೆಕ್ ಬೌನ್ಸ್ ಪ್ರಕರಣಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಮೊದಲ ಹಂತದಲ್ಲಿ 26 ಪ್ರಕರಣಗಳನ್ನು ವಿಶೇಷ ಲೋಕ ಅದಾಲತ್‌ಗೆ ಆಯ್ಕೆ ಮಾಡಲಾಗಿತ್ತು. ಅವುಗಳಲ್ಲಿ 14 ಪ್ರಕರಣಗಳು ಉಭಯ ಪಕ್ಷಗಳ ಪರಸ್ಪರ ಒಪ್ಪಂದ ಹಾಗೂ ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿದ್ದು, ಸಂಬಂಧಿತರಿಗೆ ತ್ವರಿತ ನ್ಯಾಯ ದೊರಕುವಂತಾಗಿದೆ ಎಂದು ತಿಳಿಸಿದರು.

ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವ ವ್ಯವಸ್ಥೆಯು ನ್ಯಾಯಾಲಯದ ಅಮೂಲ್ಯ ಸಮಯವನ್ನು ಉಳಿಸುವುದರ ಜೊತೆಗೆ, ವ್ಯಾಜ್ಯದಲ್ಲಿರುವ ಎರಡೂ ಪಕ್ಷಗಳ ಹಣ, ಸಮಯ ಮತ್ತು ಶ್ರಮವನ್ನು ಉಳಿಸಲು ಪರಿಣಾಮಕಾರಿ ಮಾರ್ಗವಾಗಿದೆ.

ನ್ಯಾಯಾಲಯದ ಹೊರತಾಗಿಯೇ ಸೌಹಾರ್ದಯುತ ಪರಿಹಾರ ಕಂಡುಕೊಳ್ಳಲು ಲೋಕ ಅದಾಲತ್ ಅತ್ಯುತ್ತಮ ವೇದಿಕೆಯಾಗಿದ್ದು, ಈ ವಿಶೇಷ ಲೋಕ ಅದಾಲತ್ ಮತ್ತೊಮ್ಮೆ ಅದರ ಮಹತ್ವವನ್ನು ಸಾಬೀತುಪಡಿಸಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಬಾರಿ ರಾಜಿ ಸಂಧಾನಕ್ಕೆ ಬರದ ಪ್ರಕರಣಗಳನ್ನು ಮುಂದಿನ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಲೋಕ ಅದಾಲತ್ ಹಾಗೂ ನವೆಂಬರ್‌ನಲ್ಲಿ ಆಯೋಜಿಸಲಾಗುವ ವಿಶೇಷ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಕುಂತಲಾ ಆರ್ ತಿಳಿಸಿದರು.

ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷಕಾರರು ಲೋಕ ಅದಾಲತ್‌ನ ಸೌಲಭ್ಯವನ್ನು ಬಳಸಿಕೊಂಡು ಪರಸ್ಪರ ಒಪ್ಪಂದದ ಮೂಲಕ ತಮ್ಮ ವ್ಯಾಜ್ಯಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಅವರು ಮನವಿ ಮಾಡಿದರು.

# ಒತ್ತಡ ಮುಕ್ತ ಅಭ್ಯಾಸದಿಂದ ಗುರಿ ಸಾಧನೆ: ಡಾ.ಹಿತೈಷಿ

ವಿಜಯಪುರ

ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಗುರಿ ಸಾಧಿಸಲು ಒತ್ತಡ ಮುಕ್ತ ವಾತಾವರಣದಲ್ಲಿ ಅಭ್ಯಾಸ ಮಾಡಬೇಕು ಎಂದು ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆಯ ವೈದ್ಯ ಡಾ. ಹಿತೈಷಿ ಕರೆ ನೀಡಿದರು.

ಪಟ್ಟಣದ ಗಿರಿಜಾಶಂಕರ ಕಲ್ಯಾಣ ಮಂಟಪದಲ್ಲಿ ಪ್ರಗತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವತಿಯಿಂದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ 'ಅರೋರಾ' ಸ್ವಾಗತ ಸಮಾರಂಭದಲ್ಲಿ ಅವರು ಮಾತನಾಡಿದರು.

ಪೋಷಕರಿಗೆ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಕನಸು ಇರುವುದು ಸಹಜ. ಆದರೆ, ಆ ಕನಸನ್ನು ನನಸು ಮಾಡಲು ಮಕ್ಕಳ ಮೇಲೆ ಒತ್ತಡ ಹೇರಬಾರದು. ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ ಆ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಕ್ತ ಅವಕಾಶ ನೀಡಬೇಕು. ಮಕ್ಕಳನ್ನು ಬೇರೆಯವರೊಂದಿಗೆ ಹೋಲಿಕೆ ಮಾಡಬಾರದು. ಅವರು ವಿಫಲರಾದಾಗ ಮನಸ್ಸಿಗೆ ನೋವಾಗುವಂತೆ ಮಾತನಾಡಬಾರದು. ಸಾಧನೆಗೆ ಒಂದೇ ಕ್ಷೇತ್ರವಲ್ಲ, ಹಲವು ಕ್ಷೇತ್ರಗಳಲ್ಲಿ ವಿಪುಲ ಅವಕಾಶಗಳಿವೆ. ಹೆಚ್ಚು ಸಮಯ ಓದುವುದರಿಂದ ಮಾತ್ರ ಸಾಧನೆ ಸಾಧ್ಯವಿಲ್ಲ. ಪೋಷಕರು ಮಕ್ಕಳನ್ನು ಪ್ರೋತ್ಸಾಹಿಸಬೇಕು ಎಂದರು.

ವಿದ್ಯಾರ್ಥಿಗಳು ಉಪನ್ಯಾಸಕರು ಹೇಳುವ ಪ್ರತಿಯೊಂದು ಅಂಶವನ್ನು ಗಮನವಿಟ್ಟು ಆಲಿಸಿ, ಪಾಲಿಸಿದರೆ ಉತ್ತಮ ಸಾಧನೆ ಮಾಡಬಹುದು ಎಂದು ಸಲಹೆ ನೀಡಿದರು.


**600ಕ್ಕೆ 600 ಅಂಕ ಗಳಿಸಿದರೆ ವಿಶೇಷ ಉಡುಗೊರೆ: ಎಸ್.ಕೃಪಾಶಂಕರ್**

ಸಮಾರಂಭದಲ್ಲಿ ಮಾತನಾಡಿದ ಪ್ರಗತಿ ಶಿಕ್ಷಣ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಎಸ್.ಕೃಪಾಶಂಕರ್, ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂಬ ಉದ್ದೇಶದಿಂದ 1995 ರಲ್ಲಿ ನಮ್ಮ ಸಂಸ್ಥೆ ಆರಂಭವಾಯಿತು. ಇಲ್ಲಿಯವರೆಗೆ 35 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಕಲಿತು ದೇಶ–ವಿದೇಶಗಳಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಂಡಿದ್ದಾರೆ ಎಂದರು.

ವಿದ್ಯಾರ್ಥಿಗಳು ಜೀವನದಲ್ಲಿ ನಿರ್ದಿಷ್ಟ ಗುರಿ ಹೊಂದಬೇಕು. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಮೊಬೈಲ್ ಬಳಕೆಯಿಂದ ಆದಷ್ಟು ದೂರವಿರಬೇಕು. ಸಿಗುವ ಅವಕಾಶಗಳನ್ನು ಕಳೆದುಕೊಳ್ಳಬಾರದು. ನಿರಂತರ ಪರಿಶ್ರಮ, ಏಕಾಗ್ರತೆ ಮತ್ತು ಶಿಸ್ತನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

# ರೈತರಿಗೆ ಕಾರ್ಬನ್ ಕ್ರೆಡಿಟ್‌ನಿಂದ ಹೆಚ್ಚುವರಿ ಆದಾಯ

ಕೋಲಾರ



"ಕೋಲಾರ ಜಿಲ್ಲೆಯನ್ನು ರಾಜ್ಯದ ಪ್ರಥಮ 'ಕಾರ್ಬನ್ ಜಿಲ್ಲೆ' ಯನ್ನಾಗಿ ರೂಪಿಸುವ ಬೃಹತ್ ಯೋಜನೆಯೊಂದು ಸಿದ್ಧಗೊಳ್ಳುತ್ತಿದ್ದು, ಕೃಷಿ ಅರಣ್ಯ ಬೆಳೆಸುವ ರೈತರಿಗೆ 'ಕಾರ್ಬನ್ ಕ್ರೆಡಿಟ್' ಮಾರಿ ಜಾಗತಿಕ ಮಾರುಕಟ್ಟೆಯಿಂದ ಹೆಚ್ಚುವರಿ ಆದಾಯ ತಂದುಕೊಡುವುದು ನಮ್ಮ ಪ್ರಮುಖ ಗುರಿಯಾಗಿದೆ" ಎಂದು ಮಾನ್ಯ ಮುಖ್ಯಮಂತ್ರಿಯವರ ಗೌರವಾನ್ವಿತ ಸಲಹೆಗಾರರು (ಹವಾಮಾನ ಬದಲಾವಣೆ) ಹಾಗೂ ಕರ್ನಾಟಕ ಹವಾಮಾನ ರಾಯಭಾರಿಗಳಾದ ಉಪೇಂದ್ರ ತ್ರಿಪಾಠಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿದ ಅವರು, ಈ ಯೋಜನೆಯನ್ನು ಕೇವಲ ಸರ್ಕಾರಿ ಕಾರ್ಯಕ್ರಮವನ್ನಾಗಿಸದೆ ರೈತರ ಪಾಲ್ಗೊಳ್ಳುವಿಕೆಯೊಂದಿಗೆ ಯಶಸ್ವಿಗೊಳಿಸಬೇಕು ಎಂದು ಒತ್ತು ನೀಡಿದರು. ಜಿಲ್ಲೆಯಾದ್ಯಂತ ಕನಿಷ್ಠ 10,000 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಅರಣ್ಯವನ್ನು ಅಭಿವೃದ್ಧಿಪಡಿಸುವ ಲಾಭದಾಯಕ ಆರ್ಥಿಕ ಮಾದರಿಯನ್ನು ಸಿದ್ಧಪಡಿಸಬೇಕಿದೆ. ಕೇವಲ ಮಾವು ಬೆಳೆಯುವುದಷ್ಟೇ ಅಲ್ಲದೆ ತೇಗ, ಮಹಾಗನಿ, ಸಿಲ್ವರ್ ಓಕ್, ಬೇವು, ಹೊಂಗೆ ಮತ್ತು ಹಲಸು ಮುಂತಾದ ಮರಗಳನ್ನು ಬೆಳೆಸುವ ಮೂಲಕ ರೈತರು ಹೆಚ್ಚಿನ ಪ್ರಮಾಣದಲ್ಲಿ ಕಾರ್ಬನ್ ಕ್ರೆಡಿಟ್ ಪಡೆಯಲು ಅವರನ್ನು ಉತ್ತೇಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಇದರಿಂದ ಮಹಿಳೆಯರು, ರೈತರು ಹಾಗೂ ಸಾರ್ವಜನಿಕರಿಗೆ ಪ್ರಯೋಜನವಾಗಲಿದೆ. ಜೊತೆಗೆ ಜಿಲ್ಲೆಯಲ್ಲಿ ಬಂಡವಾಳ ಹೂಡಿಕೆ, ಉದ್ಯೋಗಾವಕಾಶ ಹಾಗೂ ಪರಿಸರಮಟ್ಟ ಸುಧಾರಣೆಯಾಗಲಿದೆ ಎಂದರು.

ರೈತರು ತಾವು ಬೆಳೆಸಿದ ಮರಗಳ ಮೂಲಕ ಜಾಗತಿಕ ಮಾರುಕಟ್ಟೆಯಲ್ಲಿ ಕಾರ್ಬನ್ ಕ್ರೆಡಿಟ್ ಮಾರಾಟ ಮಾಡಿ ಆರ್ಥಿಕ ಲಾಭ ಪಡೆಯಲಿದ್ದು, ಪ್ರತಿ ಕಾರ್ಬನ್ ಕ್ರೆಡಿಟ್‌ಗೆ ಕನಿಷ್ಠ 15 ರಿಂದ 20 ಯುರೋಗಳಷ್ಟು (ಅಂದಾಜು 1500 ರಿಂದ 2000 ರೂ.) ಬೆಲೆ ಸಿಗುವ ನಿರೀಕ್ಷೆಯಿದೆ ಎಂದು ಸಭೆಯಲ್ಲಿ ವಿವರಿಸಲಾಯಿತು. ಕೇವಲ ಮರ ಬೆಳೆಸುವುದಷ್ಟೇ ಅಲ್ಲದೆ, ಹೈನುಗಾರಿಕೆ, ಡೈರಿ ಸೆಕ್ಟರ್, ಬಯೋಗ್ಯಾಸ್ ಹಾಗೂ ಸೌರಶಕ್ತಿ ಪಂಪ್‌ಸೆಟ್‌ಗಳ ಬಳಕೆಯಂತಹ ಸ್ವಯಂಪ್ರೇರಿತ

> ರೈತರು ತಾವು ಬೆಳೆಸಿದ ಮರಗಳ ಮೂಲಕ ಜಾಗತಿಕ ಮಾರುಕಟ್ಟೆಯಲ್ಲಿ ಕಾರ್ಬನ್ ಕ್ರೆಡಿಟ್ ಮಾರಾಟ ಮಾಡಿ ಆರ್ಥಿಕ ಲಾಭ ಪಡೆಯಲಿದ್ದು, ಪ್ರತಿ ಕಾರ್ಬನ್ ಕ್ರೆಡಿಟ್‌ಗೆ ಕನಿಷ್ಠ 15 ರಿಂದ 20 ಯುರೋಗಳಷ್ಟು (ಅಂದಾಜು 1500 ರಿಂದ 2000 ರೂ.) ಬೆಲೆ ಸಿಗುವ ನಿರೀಕ್ಷೆಯಿದೆ ಎಂದು ಸಭೆಯಲ್ಲಿ ವಿವರಿಸಲಾಯಿತು.

ವಲಯಗಳಲ್ಲೂ ಕಾರ್ಬನ್ ಕ್ರೆಡಿಟ್ ಪಡೆಯುವ ಸಾಧ್ಯತೆಗಳ ಬಗ್ಗೆ ವ್ಯಾಪಕ ಚರ್ಚೆ ನಡೆಸಲಾಯಿತು. ಇದಲ್ಲದೆ, ಕಾರ್ಬನ್ ಕ್ರೆಡಿಟ್ ಲೆಕ್ಕಾಚಾರ ಮತ್ತು ಪರಿಶೀಲನೆಗಾಗಿ ಅಂತರರಾಷ್ಟ್ರೀಯ ಮಟ್ಟದ ಪ್ರಮಾಣೀಕರಣ ಸಂಸ್ಥೆಗಳನ್ನು ಜಿಲ್ಲೆಗೆ ಆಹ್ವಾನಿಸುವ ಕುರಿತು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಹಾಗೂ ಮುಂದಿನ ರೂಪುರೇಷೆಗಳನ್ನು ಸಿದ್ಧಪಡಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕೃಷಿ, ತೋಟಗಾರಿಕೆ ಮತ್ತು ಹವಾಮಾನ ಸಂಬಂಧಿತ ವಿಭಾಗಗಳ ಸಂಬಂಧಿತ ಅರಿತ ವ್ಯಕ್ತಿಗಳನ್ನೊಳಗೊಂಡ ಪ್ರಮುಖ ಸಮಿತಿಯೊಂದನ್ನು ರಚಿಸಲು ಸಭೆ ನಿರ್ಧರಿಸಲಾಯಿತು.

ಸಮಿತಿ ರಚನೆಯಾದ ನಂತರ ಈ ಬಗ್ಗೆ ಚರ್ಚಿಸಿ, ಮುಂದಿನ ತಿಂಗಳ ವೇಳೆಗೆ ಮರುಸಭೆ, ಕಾರ್ಯಾಗಾರದ ಮೂಲಕ ರೈತರಿಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದರ ಬಗೆಗೆ ಸಹ ಚರ್ಚಿಸಲಾಯಿತು.

ಕಾರ್ಬನ್ ಜಿಲ್ಲೆಗಳಾಗಿ ಪರಿವರ್ತನೆಯಾದ ಜಿಲ್ಲೆಯೊಂದರಲ್ಲಿ ಉತ್ಪಾದವಾಗುವ ಇಂಘಾಲದ ಪ್ರಮಾಣವನ್ನು ಕನಿಷ್ಠ ಮಟ್ಟಕ್ಕೆ ಇಳಿಸಿ ಅಷ್ಟೇ ಪ್ರಮಾಣದ ಇಂಗಾಲವನ್ನು ಮರ–ಗಿಡಗಳು ಅಥವಾ ತಂತ್ರಜ್ಞಾನದ ಮೂಲಕ ಹೀರಿಕೊಳ್ಳುವಂತೆ ಮಾಡುವುವು ಇದರ ಉದ್ದೇಶ. ಜಾಗತಿಕ ತಾಪಮಾನ ಏರಿಕೆಯನ್ನು ತಡೆಯಲು ಜಿಲ್ಲಾ ಮಟ್ಟದಲ್ಲಿ ಪರಿಸರ ಸ್ನೇಹಿ ಕ್ರಮಗಳನ್ನು ಕೈಗೊಳ್ಳುವುದು, ಕಲ್ಲಿದ್ದಿಲಿನ ಮೇಲಿನ ಅವಲಂಬನೆ ಕಡಿಮೆ ಮಾಡಿ ಸೌರಶಕ್ತಿ ಬಳಕೆ ಹೆಚ್ಚಿಸುವುದು ಸಹ ಮುಖ್ಯವಾಗಿದೆ.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಎಂ. ಆರ್ ರವಿ, ಅಪರ ಜಿಲ್ಲಾಧಿಕಾರಿ ಎಸ್. ಎಂ. ಮಂಗಳ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಟಿ. ಕೆ. ರಮೇಶ್, ಕೃಷಿ ಉಪನಿರ್ದೇಶಕಿ ಮಂಜುಳ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಮೈಲಾರಪ್ಪ, ತೋಟಗಾರಿಕೆ ಅಪರ ನಿರ್ದೇಶಕರು ಡಾ|| ಪಿ. ಎಂ. ಶೋಬರದ್ ರವಿಕುಮಾರ್ ಎಸ್. ಎ ಉಪನಿರ್ದೇಶಕ ಕುಮಾರಸ್ವಾಮಿ, ಸುಜಿತ್ ಎನ್. ಬಿ. ಸಂದೀಪ್ ವಿ., ಅರಣ್ಯ ಇಲಾಖೆ ಧನಲಕ್ಷ್ಮಿ ಕೆ. ವಿ.ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಗಿರೀಶ್ ಎ. ಆರ್.ರೂಪೇಶ್ ಎನ್. ಬಿ. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಮೈಲಾರಪ್ಪ, ಜಿಲ್ಲಾ ಭೂ ವಿಜ್ಞಾನಿ ತಿಪ್ಪೆಸ್ವಾಮಿ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರಿಕೆ



ಬೆಂಗಳೂರು

ಪಾದಚಾರಿಗಳಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಶುಕ್ರವಾರವೂ ಮುಂದುವರಿಯಿತು.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ನಿರ್ದೇಶನದಂತೆ ಹಾಗೂ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯಾಚರಣೆ ನಡೆಸಲಾಯಿತು.

ಕಾರ್ಯಾಚರಣೆಯಲ್ಲಿ ಒಟ್ಟು 2.80 ಕಿ.ಮೀ. ಉದ್ದದ ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮುಕ್ತಗೊಳಿಸಲಾಗಿದೆ.

ಪುಲಿಕೇಶಿನಗರ ವಿಭಾಗದ ಟ್ಯಾನರಿ ರಸ್ತೆಯಲ್ಲಿ ಪೆರಿಯಾರ್ ವೃತ್ತದಿಂದ ವೆಂಕಟೇಶ್ವರ ದೇವಸ್ಥಾನದವರೆಗೆ ಸುಮಾರು 1 ಕಿ.ಮೀ. ಪ್ರದೇಶದಲ್ಲಿ ಒತ್ತುವರಿ ತೆರವು ಮಾಡಲಾಗಿದೆ.

ಯಲಹಂಕ ವಿಭಾಗದ ಎಂ.ಎಸ್. ಪಾಳ್ಯ 16ನೇ ಅಡ್ಡರಸ್ತೆಯಲ್ಲಿ ಸುಮಾರು 1 ಕಿ.ಮೀ. ಹಾಗೂ ದಾಸರಹಳ್ಳಿ ವಿಭಾಗದ ಕುಮ್ಮಾರನಹಳ್ಳಿ ಮುಖ್ಯರಸ್ತೆಯಲ್ಲಿ ಸುಮಾರು 0.80 ಕಿ.ಮೀ. ಉದ್ದದ ಪಾದಚಾರಿ ಮಾರ್ಗದಲ್ಲಿನ ಅಕ್ರಮ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ.

ಕಾರ್ಯಾಚರಣೆ ವೇಳೆ 2 ಅಂಗಡಿ ಹಾಗೂ ಪೆಟ್ಟಿಗೆ ಅಂಗಡಿಗಳು, 8 ತಳ್ಳುಗಾಡಿಗಳು, 20 ಶೀಟ್‌ಗಳು, ಕೆನೋಪಿಗಳು ಹಾಗೂ ಮೇಲ್ಚಾವಣಿ ವಿಸ್ತರಣೆಗಳು, 10 ಮೆಟ್ಟಿಲುಗಳು, 21 ಜಾಹೀರಾತು ಹಾಗೂ ನಾಮಫಲಕಗಳು ಮತ್ತು ಸುಮಾರು 18 ಟನ್ ಕಟ್ಟಡ ತ್ಯಾಜ್ಯ ಹಾಗೂ ಮಣ್ಣು ಧೂಳನ್ನು ತೆರವುಗೊಳಿಸಲಾಗಿದೆ.

# ಹುಂಡಿ ಎಣಿಕೆ ಪ್ರಕರಣ: ಪತಿಯ ವಿರುದ್ಧದ ಆರೋಪ ಉದ್ದೇಶಪೂರ್ವಕ ಎಂದ ಪತ್ನಿ

ಬೇತಮಂಗಲ



ತಾಲೂಕಿನ ಪ್ರಸಿದ್ಧ ಬಂಗಾರ ತಿರುಪತಿ (ಗುಟ್ಟಹಳ್ಳಿ) ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ಹುಂಡಿ ಎಣಿಕೆ ವೇಳೆ ಹಣ ಕಳವು ಮಾಡಿದ ಆರೋಪಕ್ಕೆ ಗುರಿಯಾಗಿರುವ ಡಿ ಗ್ರೂಪ್ ನೌಕರ ಮಂಜುನಾಥ್ ಅಲಿಯಾಸ್ ವೆಂಕಟೇಶ್ ವಿರುದ್ಧದ ಕ್ರಮ ಉದ್ದೇಶಪೂರ್ವಕವಾಗಿದೆ ಎಂದು ಅವರ ಪತ್ನಿ ಅನಿತ ಆರೋಪಿಸಿದ್ದಾರೆ.

ಘಟನೆ ನಡೆದ ಸ್ಥಳದಲ್ಲೇ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಪತಿ ಅಮಾನತುಗೊಳ್ಳುವಷ್ಟು ದೊಡ್ಡ ತಪ್ಪು ಮಾಡಿಲ್ಲ. ಅಧಿಕಾರಿಗಳು ಪೂರ್ವಯೋಜಿತವಾಗಿ ಈ ಪ್ರಕರಣವನ್ನು ರೂಪಿಸಿದ್ದಾರೆ ಎಂದು ಆರೋಪಿಸಿದರು.

ಹಸುವಿಗೆ ಮೇವು ತರಲು ತಾವೇ ಮನೆಯಿಂದ ರೂ.2,000 ನೀಡಿ ಕಳುಹಿಸಿದ್ದೆ. ಉಳಿದ ರೂ.1,100 ಕುರಿತು ಸಮಗ್ರ ತನಿಖೆ ನಡೆಯಲಿ. ಆದರೆ ಅಮಾನತು ಮಾಡುವ ಅಧಿಕಾರ ಕಾರ್ಯನಿರ್ವಹಣಾಧಿಕಾರಿಗಳಿಗೆ ಇಲ್ಲ. ಈ ಪ್ರಕರಣದಲ್ಲಿ ನೀಡಲಾಗಿರುವ ಹೇಳಿಕೆಗಳ ಬಗ್ಗೆಯೂ ಅನುಮಾನಗಳಿವೆ ಎಂದು ಹೇಳಿದರು. ಹುಂಡಿ ಎಣಿಕೆ ವೇಳೆ ಸರ್ಕಾರದ ಸುತ್ತೋಲೆ ಹಾಗೂ ಕಾನೂನು ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿದ ಅವರು, ಮುಜರಾಯಿ ಇಲಾಖೆ, ಕಂದಾಯ ಇಲಾಖೆ ಹಾಗೂ ಬ್ಯಾಂಕ್ ಸಿಬ್ಬಂದಿಯ ಬದಲಾಗಿ ಖಾಸಗಿ ವ್ಯಕ್ತಿಗಳಿಗೆ ಹುಂಡಿ ಎಣಿಕೆ ಸ್ಥಳದಲ್ಲಿ ಅವಕಾಶ ನೀಡಲಾಗಿದೆ ಎಂದು ದೂರಿದರು.

ಹುಂಡಿ ಎಣಿಕೆಯಲ್ಲಿ ಭಾಗವಹಿಸುವ ಸಿಬ್ಬಂದಿ ಹಾಗೂ ಅಧಿಕಾರಿಗಳ ಬಳಿಯಲ್ಲಿರುವ ನಗದು, ಚಿನ್ನ ಹಾಗೂ ಬೆಳ್ಳಿಯ ವಿವರಗಳನ್ನು ಲೆಕ್ಕ ಪುಸ್ತಕದಲ್ಲಿ ದಾಖಲಿಸಬೇಕೆಂಬ ನಿಯಮವಿದ್ದರೂ ಅದನ್ನು ಪಾಲಿಸಿಲ್ಲ ಎಂದು ಅವರು ಆರೋಪಿಸಿದರು.

ಈ ಹಿಂದೆಯೂ ದೇವಸ್ಥಾನದಲ್ಲಿ ಕಳವು ಪ್ರಕರಣಗಳು ನಡೆದಿದ್ದರೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿಲ್ಲ. ಕೆಲವರನ್ನು ಕೇವಲ ವರ್ಗಾವಣೆ ಮಾಡಿ ಮತ್ತೆ ಅದೇ ಸ್ಥಳಕ್ಕೆ ನೇಮಕ ಮಾಡಲಾಗಿದೆ. ಅಧಿಕಾರಿಗಳಿಗೆ ಒಂದು ನ್ಯಾಯ, ಡಿ ಗ್ರೂಪ್ ನೌಕರರಿಗೆ ಮತ್ತೊಂದು ನ್ಯಾಯ ಎಂಬ ರೀತಿಯಲ್ಲಿ ನಡೆದುಕೊಳ್ಳಲಾಗುತ್ತಿದೆ ಎಂದು ಅನಿತ ಪ್ರಶ್ನಿಸಿದರು.

ತಮಗೆ ಮೂರು ಹೆಣ್ಣು ಮಕ್ಕಳಿದ್ದು, ಕುಟುಂಬಕ್ಕೆ ತಮ್ಮ ಪತಿಯೇ ಏಕೈಕ ಆಧಾರವಾಗಿದ್ದಾರೆ. ಯಾವುದೇ ಕಾರಣಕ್ಕೂ ಅವರನ್ನು ಅಮಾನತುಗೊಳಿಸಬಾರದು. ಒಂದು ವೇಳೆ ಅಮಾನತು ಮಾಡಿದರೆ ಕುಟುಂಬ ಸಮೇತ ಜಿಲ್ಲಾಧಿಕಾರಿ ಕಚೇರಿ ಎದುರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಭಾವನಾತ್ಮಕವಾಗಿ ಎಚ್ಚರಿಕೆ ನೀಡಿದರು.

ಇದೇ ವೇಳೆ ದೇವಸ್ಥಾನದ ಕೆಲ ಧರ್ಮಾಧಿಕಾರಿಗಳು ಹಾಗೂ ಅಧಿಕಾರಿಗಳ ಮನೆಗಳಿಗೆ ಸಕ್ಕರೆ, ಎಣ್ಣೆ, ಗೋಡಂಬಿ ಸೇರಿದಂತೆ ವಿವಿಧ ಸಾಮಗ್ರಿಗಳನ್ನು ಅಕ್ರಮವಾಗಿ ಸಾಗಿಸಲಾಗಿದೆ ಎಂಬ ಗಂಭೀರ ಆರೋಪವನ್ನೂ ಅವರು ಮಾಡಿದರು. ಈ ಎಲ್ಲ ಆರೋಪಗಳ ಕುರಿತು ಉನ್ನತ ಮಟ್ಟದ, ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಬೆಳವಣಿಗೆಯ ಬೆನ್ನಲ್ಲೇ, ಪ್ರಕರಣದಲ್ಲಿ ಸಣ್ಣ ಮಟ್ಟದ ನೌಕರರ ವಿರುದ್ಧ ಮಾತ್ರ ಕ್ರಮ ಕೈಗೊಳ್ಳಲಾಗುತ್ತಿದ್ದು, ದೊಡ್ಡ ಮಟ್ಟದ ಅಕ್ರಮಗಳ ಆರೋಪಗಳ ಬಗ್ಗೆಯೂ ಸಮಗ್ರ ತನಿಖೆ ನಡೆಯಬೇಕು ಎಂಬ ಒತ್ತಾಯ ಸಾರ್ವಜನಿಕ ವಲಯದಿಂದ ಕೇಳಿಬರುತ್ತಿದೆ.

